ಅಗಲವಾದ ರಸ್ತೆಗಳಿಂದ ಕೂಡಿದ, ಸಂಖ್ಯೆಗಳನ್ನು ಹೊಂದಿದ, ಚೌಕಗಳಿಂದ ಉಜ್ವಲವಾದ, ಸ್ಟಾಕ್ ಮಾರ್ಕೆಟ್, ಸಭಾಂಗಣ, ಚರ್ಚುಗಳು, ಶಾಲೆಗಳು, ಸಮುದ್ರದ ಶೆಟ್, ಸುಂಕದ ಕಟ್ಟೆ, ಹಡಗು ಕಟ್ಟೆಗಳು, ಗೋದಾಮುಗಳು, ಹಡಗು ತಯಾರಿಸುವ ಸ್ಥಳಗಳು ಇತ್ಯಾದಿಗಳಿಂದ ಕೂಡಿದ ವಿಶಾಲವಾದ ನಗರವೊಂದು ಕೆಂಪು ನದಿಯ ದಂಡೆಗುಂಟ ಹರಡಿಕೊಂಡಿತು. ಅದಕ್ಕೆ ಅರಣ್ಯ ನಗರಿ ಎಂದು ಹೆಸರಿಡಲಾಯಿತು. ಶೀಘ್ರವೇ ಹೊಸದಾಗಿ ಗಿಲಾವು ಮಾಡಿದ ನಗರವನ್ನು ಸ್ವಚ್ಛಗೊಳಿಸುವ, ಒರೆಸುವ ಜನರಿಂದ ತುಂಬಿ ತುಳಕತೊಡಗಿತು. ನಗರವು ಬಿಡುವಿಲ್ಲದ ಚಟುವಟಿಕೆಗಳಿಂದ ತುಂಬಿ ಹೋದಾಗಲೇ ಅತ್ತ ಬೆಟ್ಟಗಳ ಸುತ್ತಮುತ್ತಲೂ ಜನರ ಗುಂಪಿನಿಂದ ಗಿಜಗುಡುವ ರಸ್ತೆಗಳನ್ನು ಮತ್ತು ನಾವೆಗಳನ್ನು ನೋಡುತ್ತಿರುವ ಕಪ್ಪಾದ ಭಯಂಕರ ಆಕೃತಿಯೊಂದು ಅರ್ಧವರ್ತುಲಾಕಾರದಲ್ಲಿ ಹರಡಿಕೊಂಡಿತ್ತು. ಅದು ಎಚ್ಚರದಿಂದ ಎಲ್ಲವನ್ನು ಗಮನಿಸುತ್ತಿರುವ ಅರಣ್ಯವೇ ಆಗಿತ್ತು. ಅದು ನದಿಯ ಮೇಲಿನ ತನ್ನ ಜಾಗವನ್ನು ಬೃಹದಾಕಾರದ ಮರಗಳಿಂದ ಕೂಡಿದ ಮೂರು ಮೈಲಿ ಜಾಗವನ್ನು ಆಕ್ರಮಿಸಿ ತನಗೆ ಮುಖಭಂಗ ಮಾಡಿದ ನಗರವನ್ನು ನೋಡುತ್ತಿತ್ತು. ಇಡೀ ಅರಣ್ಯ ನಗರಿಯನ್ನು ಕೇವಲ ತನಗೆ ಸೇರಿದ ಜೀವರಾಶಿಯನ್ನು ಬೆಳಸಿ ಕಟ್ಟಲಾಗಿತ್ತು. ಬಂದರಿನಲ್ಲಿ ಓಲಾಡುತ್ತಿರುವ ಎತ್ತರವಾದ ಹಡಗಿನ ಕಂಬಗಳು, ಎದುರು ಬದುರು ಚಾಚಿರುವ ಅಸಂಖ್ಯಾತ ಛಾವಣಿಗಳು, ದೂರದ ಉಪ ನಗರದ ಕೊನೆಯ ಕ್ಯಾಬಿನ್‌ವರೆಗೆ ಅರಣ್ಯವು ಕೆಲಸಗಾರರಿಗೆ ಬೇಕಾಗುವ ಸಾಮಾನಿನಿಂದ ಫರ್ನಿಚರ್‌ವರೆಗೆ ಕೇವಲ ತನ್ನ ಕೊಂಬೆಗಳಿಂದಲೇ ಎಲ್ಲವನ್ನೂ ಒದಗಿಸಿತ್ತು. ಎಂತಹ ಉಗ್ರವಾದ ದ್ವೇಷವನ್ನು ಅರಣ್ಯ ಕಳ್ಳರ ನಗರದ ಮೇಲೆ ಬೆಳೆಸಿಕೊಂಡಿತ್ತು.

ಚಳಿಗಾಲ ಮುಂದುವರೆದಂತೆಲ್ಲ ಏನೋ ತಪ್ಪು ಘಟಿಸುತ್ತಿರುವುದನ್ನು ಯಾರೂ ಗಮನಿಸಲಿಲ್ಲ. ಯಾರೂ ಯಾವ ಅಸಹಜತೆಯನ್ನು ಗಮನಿಸಲಿಲ್ಲ. ಅರಣ್ಯ ನಗರದ ನಿವಾಸಿಗಳು ತಮ್ಮ ಛಾವಣಿಗಳು, ತಮ್ಮ ಫರ್ನಿಚರ್‌ಗಳು ಸೀಳುವ ಶಬ್ದವನ್ನು ಆಗಾಗ ಕೇಳಿಸಿಕೊಂಡರು. ಆಗಾಗ ಗೋಡೆ ಸೀಳಿತು. ಅಂಗಡಿಯ ಕೌಂಟರ್ ಒಡೆಯಿತು. ಆದರೆ, ಹೊಸ ಕಟ್ಟಿಗೆಯಿದ್ದಾಗ ಹೀಗಾಗುವುದು ಸಹಜವೆಂದು ಇಂತಹ ಘಟನೆಗಳಿಗೆ ಯಾರೂ ಹೆಚ್ಚಿನ ಮಹತ್ವ ನೀಡಲಿಲ್ಲ. ಆದರೆ, ವಸಂತ ಋತುವಿನ ಆಗಮನ ಎಂತಹ ಸಮೃದ್ಧವಾದ ಜೀವರಸವನ್ನು ತುಂಬಿತೆಂದರೆ ಭೂಮಿಯ ಆಳದಿಂದ ಸತ್ವ ಹೀರಿಕೊಂಡಂತೆ ಅದೃಶ್ಯ ಜೀವಂತ ಶಕ್ತಿಯಿಂದ ಮೇಲೆದ್ದು ನೆಲ ನಡುಗಲಾರಂಭಿಸಿತು. ಪ್ರತಿ ಮನೆಯಲ್ಲಿ ಪೀಠೋಪಕರಣಗಳು, ಗೋಡೆಗಳು, ಉಬ್ಬಿದವು. ನೆಲದ ಮೇಲೆ ಬೊಬ್ಬೆ ಎದ್ದವು.

ಬಾಗಿಲುಗಳನ್ನು, ಕಿಟಕಿಗಳನ್ನು ಹಾಕಲು ತೆಗೆಯಲು ಬರಲಿಲ್ಲ. "ಇದು ತೇವದಿಂದಾದದ್ದು" ಅಂದರು ಜನ. ಶಾಖದಿಂದ ಉಷ್ಣದಿಂದ ಎಲ್ಲ ಸರಿಹೋಗುತ್ತದೆ ಎಂದುಕೊಂಡರು. ಒಮ್ಮಿಂದೊಮ್ಮಲೆ ಸಮುದ್ರದಿಂದ ಬಿರುಗಾಳಿ ರಾತ್ರೋರಾತ್ರಿ ಧಡಿಯೇಟಿನಂತೆ ಬಡಿಯಿತು. ಅದು ಮಿಂಚು ಮಳೆಯೊಂದಿಗೆ ಬೇಸಿಗೆಯನ್ನು ತಂದಿತು. ನಗರ ಆಶ್ಚರ್ಯದ ಕೂಗಿನೊಂದಿಗೆ ಎಚ್ಚರಗೊಂಡಿತು. ಸಾರ್ವಜನಿಕ ಕಟ್ಟಡಗಳ, ಕೆಂಪು ಛಾವಣಿಗಳು, ಚರ್ಚಿನ ಗೋಪುರಗಳು, ಮನೆಗಳು, ಪಲ್ಲಂಗಗಳು ಕಟ್ಟಡಗಳು, ಪ್ರತಿಯೊಂದೂ ತೆಳ್ಳಗಿನ, ಪಟ್ಟಿಯಂತಹ ಹಸುರು ಬಣ್ಣ ಸಿಂಪಡಿಸಿದಂತಾದವು. ಮೇಲೆ ತುಂಬ ಹತ್ತಿರದಿಂದ ನೋಡಿದಾಗ ಕಣ್ಣಿಗೆ ಕಾಣಿಸದಷ್ಟು ಚಿಕ್ಕದಾದ ಮೊಗ್ಗುಗಳನ್ನು, ಸುರುಳಿ ಬಿಚ್ಚುತ್ತಿರುವ ಎಲೆಗಳನ್ನು ಕಾಣಬಹುದಾಗಿತ್ತು. ಈ ಅಡ್ಡ ಮಳೆ ಬಗ್ಗೆ ಜನ ಅಷ್ಟೇನೂ ಚಿಂತಿತರಾಗದೇ ಮಾತನಾಡಿಕೊಂಡರು. ಆದರೆ, ಸಂಜೆಗಿಂತ ಮುಂಚೆಯೇ ಎಲ್ಲ ಪೀಠೋಪಕರಣಗಳು ಅರಳಿಕೊಂಡಿದ್ದವು. ಕೊಂಬೆಗಳು ಟಿಸಿಲೊಡೆದವು ಮೃದುವಾಗಿ ಒತ್ತಿ ನೋಡಿದ್ದರೆ ಅವು ಬೆಳೆಯುತ್ತಿರುವುದು, ರೆಕ್ಕೆಗಳಂತೆ ಕಂಪಿಸುತ್ತಿರುವುದು ಗೊತ್ತಾಗುತ್ತಿತ್ತು.

ಮರುದಿನ ಎಲ್ಲ ಕಟ್ಟಡ ಸಮುಚ್ಚಯಗಳು ಪಕ್ಷಿಗಳ ಉಗುರಿನಂತೆ ಕಾಣ ತೊಡಗಿದವು. ಬಳ್ಳಿಗಳು